**ದಿ: 24-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀಸವಾಲು: ಶ್ರೀ ಎಮ್.ಜಿ. ವಕೀಲರಿಂದ: -**

1. ನಾನು 2015 ರಿಂದ ಮಲ್ಲೇದೇವರುಗಡ್ಡ ಗ್ರಾಮ ಪಂಚಾಯಿತಿಯಲ್ಲಿ ಬಿಲ್ ಕಲೆಕ್ಟ್ ರ್ ಎಂದು ಕೆಲಸ ಮಾಡುತ್ತಿದ್ದೇನೆ. ದಾವಾ ಸಲ್ಲಿಸಿದ ನಂತರ ನ್ಯಾಯಾಲಯದ ಪ್ರತಿ ಮುದ್ದತಿಗೆ ನಾನು ಹಾಜರು ಇದ್ದೇನೆ. ಕೆಲವು ಸಲ ನ್ಯಾಯಾಲಯಕ್ಕೆ ಬಂದಾಗ ಸಾಯಂಕಾಲದ ಸಮಯದವರೆಗೂ ಇದ್ದೇನೆ. ಯಾವುದೇ ಸರಕಾರಿ ಇಲಾಖೆಯ ನೌಕರರು ನ್ಯಾಯಾಲಯದ ಕಲಾಪಕ್ಕೆ ಬರಬೇಕಾದರೆ ಅನುಮತಿಯನ್ನು ಪಡೆದುಕೊಂಡು ಬರಬೇಕೆಂದರೆ ಸರಿ. ನಾನು ನ್ಯಾಯಾಲಯಕ್ಕೆ ಮುದ್ದತ್ ನ ಹಾಜರಿದ್ದ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳಿಂದ ಅನುಮತಿಯನ್ನು ಹಾಜರುಪಡಿಸಿರುವುದಿಲ್ಲ. ಸಾಕ್ಷಿ ಮುಂದುವರಿದು ಮೌಖಿಕವಾಗಿ ಅನುಮತಿಯನ್ನು ಪಡೆದುಕೊಂಡಿರುತ್ತೇನೆ ಎಂದು ಹೇಳುತ್ತಾರೆ. ನೀವು ಮೌಖಿಕವಾಗಿ ಅನುಮತಿಯನ್ನು ಪಡೆದುಕೊಂಡಿರುತ್ತೇನೆಂದು ಸುಳ್ಳು ಹೆಳುತ್ತಿದ್ದೀರಿ ಎಂದರೆ ಸರಿಯಲ್ಲ. ಮೌಖಿಕವಾಗಿ ಅನುಮತಿಯನ್ನು ಪಡೆಯಬೇಕಾದರೆ ನಿಯಮಾವಳಿಗಳು ಇವೆ ಎಂದರೆ ಸರಿ.

2. ವಾದ ನಿಮ್ಮ ದೊಡ್ಡಪ್ಪನ ಮಗನಾಗಿರುತ್ತಾನೆ ಎಂದರೆ ಸರಿ. ನಿಮಗೆ ಮತ್ತು ವಾದಿಗೆ ಹೊಲದಲ್ಲಿ ಭಾಗ ಆಗಿರುತ್ತದೆ ಎಂದರೆ ಸರಿ. ಭಾಗಕ್ಕೆ ಬಂದ ನಂತರ ವಾದಿ ಆಸ್ತಿಯಲ್ಲಿ ಅವರು ಸಾಗುವಳಿ ಮಾಡುತ್ತಿದ್ದಾರೆ ನಿಮ್ಮ ಆಸ್ತಿಯಲ್ಲಿ ನೀವು ಸಾಗುವಳಿ ಮಾಡುತ್ತಿದ್ದೀರಿ ಎಂದರೆ ಸರಿ. ದಾವಾ ಸಲ್ಲಿಸುವ 14 ವರ್ಷಗಳ ಹಿಂದೆಯ ಭಾಗ ಆಗಿರುತ್ತದೆ ಎಂದರೆ ಸರಿ. ದಾವಾ ಆಸ್ತಿ ಸ ನಂ 77 ಹಿಸ್ಸಾ 1 ಒಟ್ಟು ಕ್ಷೇತ್ರ 06 ಎಕರೆ 25 ಗುಂಟೆ ಇರುತ್ತದೆ ಎಂದರೆ ಸರಿ. ಅದರಲ್ಲಿ 02 ಎಕರೆ 08 ಗುಂಟೆ ವಾದಿ ಭಾಗಕ್ಕೆ ಬಂದಿರುತ್ತದೆ ಎಂದರೆ ಸಾಕ್ಷಿಯು 02 ಎಕರೆ 08 ಗುಂಟೆ ಬಂದಿದೆ ಎಂದು ಹೇಳುತ್ತಾರೆ. ಒಟ್ಟು ಕ್ಷೇತ್ರದಲ್ಲಿ ಕೆನಾಲ್ ಗೆ ಜಮೀನು ಹೋಗಿರುತ್ತದೆ ಎಂದರೆ ಸರಿ. ತುಂಗಭದ್ರಾ ಕೆನಾಲ್ ಗೆ ಜಮೀನು

ಪಶ್ಚಿಮ ದಿಂದ ಪೂರ್ವ ದಿಕ್ಕಿಗೆ ಹೋಗಿದೆ ಎಂದರೆ ಸರಿ. ಕೆನಾಲ್ ನ ಎರಡು ಬದಿಗೆ ರಸ್ತೆ ಇರುತ್ತದೆ ಎಂದರೆ ಸಾಕ್ಷಿಯು ದಕ್ಷಿಣ ಬದಿಗೆ ಒಂದೇ ಕಡೆ ರಸ್ತೆ ಇದೆ ಎನ್ನುತ್ತಾರೆ. ಕೆನಾಲ್ ನ ಉತ್ತರ ದಿಕ್ಕಿಗೆ ನಮ್ಮೆಲ್ಲರ ಹೊಲಗಳು ಬರುತ್ತವೆ ಎಂದರೆ ಸರಿ. ಕೆನಾಲ್ ನೀರು ಮೊದಲು 3ನೇ ಪ್ರತಿವಾದಿ ಹೊಲಕ್ಕೆ ನಂತರ 6ನೇ ಪ್ರತಿವಾದಿ ಹೊಲಕ್ಕೆ, ನಂತರ ವಾದಿ ಹೊಲಕ್ಕೆ ಹಾದು ಹೋಗುತ್ತದೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಈ ರೀತಿ ನೀವು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

3. 2015 ರಿಂದ ನಾನು ಒಕ್ಕಲುತನ ಮಾಡುವುದಿಲ್ಲ, ಪಂಚಾಯಿತಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿ. ಜಮೀನಿನಲ್ಲಿ ಬಿತ್ತುವುದು ಬೆಳೆಯುವುದನ್ನು ಉಳುಮೆ ಮಾಡುವುದನ್ನು ನೀವು ಮಾಡುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರಿದು ರಜೆ ಇದ್ದಾಗ ಜಮೀನಿಗೆ ಹೋಗುತ್ತೇನೆ ಎಂದು ಹೇಳುತ್ತಾರೆ. ನೀವು ರಜೆ ದಿನ ಇದ್ದಾಗ ಜಮೀನಿಗೆ ಹೋಗುತ್ತೇನೆಂದು ಸುಳ್ಳು ಹೇಳುತ್ತಿದ್ದಿರಾ ಮತ್ತು ದಾವಾ ಜಮೀನು ನೀವು ಎಂದು ನೋಡಿಲ್ಲ ಎಂದರೆ ಸರಿಯಲ್ಲ. ಪ್ರತಿವಾದ ಪತ್ರದ ಮತ್ತು ಸಾಕ್ಷಿ ಪ್ರಮಾಣ ಪತ್ರದ ಅಂಶಗಳನ್ನು ನಾನೇ ಹೇಳಿ ಬರೆಸಿದ್ದೇನೆ ಮತ್ತು ಅದನ್ನು ಓದಿ ಸಹಿ ಮಾಡಿರುತ್ತೇನೆ. ನಿಮ್ಮ ಸಾಕ್ಷಿ ಪ್ರಮಾಣ ಪತ್ರದಲ್ಲಿ ನಿಮ್ಮ ಉದ್ಯೋಗ ಒಕ್ಕಲುತನ ಎಂದು ಸುಳ್ಳು ಹೇಳಿ ಬರೆಸಿದ್ದೀರಿ ಎಂದರೆ ಸರಿಯಲ್ಲ.

4. ವಾದಿಯ ಭಾಗಕ್ಕೆ ಬಂದ 02 ಎಕರೆ 08 ಗುಂಟೆ ಜಮೀನಿನಲ್ಲಿ 02 ಬೋರವೆಲ್ ಮತ್ತು ಒಂದು ಟಿ ಸಿ ಇದೆ ಎಂದರೆ ಸಾಕ್ಷಿಯು ಇಲ್ಲ ಎನ್ನುತ್ತಾರೆ. ಪ್ರತಿವಾದಿಯರ ಹೊಲದಲ್ಲಿ ತೊಗರಿ, ಹತ್ತಿ ಮತ್ತು ಸಜ್ಜಿ ಬೆಳೆಗಳನ್ನು ಬೆಳೆಯುತ್ತಾರೆ. ಈ ಮೂರು ಬೆಳಗಳನ್ನು ಬೆಳೆಯಲು ನೀರು ಅವಶ್ಯಕತೆ ಇದೆ ಎಂದರೆ ಸರಿ. ಪ್ರತಿವಾದಿಯರ ಜಮೀನಿಗೆ ನೀರು ವಾದಿಯ ಬೋರವೆಲ್ ನಿಂದ ಸರಬರಾಜು ಆಗುತ್ತವೆ ಎಂದರೆ ಸರಿಯಲ್ಲ. ಮೇಲ್ಕಂಡ ವಿಷಯದ ಬಗ್ಗೆ ನೀವು ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ವಾದಿಯ ಮತ್ತು ನಿಮ್ಮ ನಡುವೆ ಜಮೀನಿನಲ್ಲಿ ಬೋರವೆಲ್ ಸಲುವಾಗಿ ನವೆಂಬರ್ 2023 ರಂದು ಜಗಳ ಆಗಿತ್ತು ಎಂದರೆ ಸರಿ. ಪೋಲಿಸ್ ಠಾಣೆಯಲ್ಲಿ ಕರೆಯಿಸಿ ಬುದ್ದಿವಾದ ಹೇಳಿ ಕಳುಹಿಸಿಕೊಟ್ಟಿರುತ್ತಾರೆಂದರೆ ಸರಿ. ದಿನಾಂಕ: 08-03-2024 ರಂದು ಬೋರವೆಲ್ ಸಲುವಾಗಿ ವಾದಿಗೂ ಮತ್ತು ಪ್ರತಿವಾದಿಯರಿಗೂ ಜಗಳ ಆಗಿ ಹೊಡೆ ಬಡೆ ಆಗಿರುತ್ತದೆ ಎಂದರೆ ಸರಿ. ಜಗಳದ ಬಗ್ಗೆ ನಿಮ್ಮ ಮೇಲೆ ಎಫ್ ಐ ಆರ್ ದಾಖಲಾಗಿತ್ತು ಎಂದರೆ ಸರಿ. ಅದರ ಗುನ್ನೆ ನಂಬರ್ 77/2024 ಆಗಿರುತ್ತದೆ ಎಂದರೆ ಸರಿ. ಸದರಿ ಎಫ್ ಐ ಆರ್ ಬಸನಗೌಡ, ತಿಮ್ಮನಗೌಡ, ಮೌನೇಶ, ವೆಂಕಟೇಶ, ನಾಗರಾಜ, ಹನುಮಗೌಡ, ತಿಮ್ಮಪ್ಪ ಮತ್ತು ಭಾಗ್ಯಮ್ಮ ಇವರ ಮೇಲೆ ಆಗಿದೆ ಎಂದರೆ ಸರಿ. ವಾದಿಯ ಹೊಲದಲ್ಲಿದ್ದ ಬೋರವೆಲ್ ನ್ನು ಕಿತ್ತಿ ಹಾಕಿ ಹೊಡೆ ಬಡೆ ಮಾಡಿದ್ದೀರಿ ಎಂದು ಎಫ್ ಐ ಆರ್ ಆಗಿದೆ ಎಮದರೆ ಸಾಕ್ಷಿಯು ಅವರು ಸುಳ್ಳು ಎಫ್ ಐ ಆರ್ ಮಾಡಿದ್ದಾರೆ ಎನ್ನುತ್ತಾರೆ. ಸದರಿ ಪ್ರಕರಣಕ್ಕೆ ಸಂಬಂಧಪಟ್ಟಂತೆ ಅಂತಿಮ ವರದಿಯನ್ನು ಸಲ್ಲಿಸಿ ಸಿಸಿ ನಂಬರ್ 281/2024 ಪ್ರಕರಣ ಚಾಲ್ತಿಯಲ್ಲಿರುತ್ತದೆ ಎಂದರೆ ಸರಿ. ಈ ರೀತಿ ವಾದಿಗೆ ಜಮೀನು ಸಾಗುವಳಿ ಮಾಡಲು ಬಿಡಲಾರದ ಕಾರಣ ಪ್ರಕರಣ ದಾಖಲಾಗಿರುತ್ತವೆ ಎಂದರೆ ಸುಳ್ಳು.

5. ಭೋರವೆಲ್ ಸಂಬಂಧ ನಿ ಡಿ 2 ರಂತೆ ದಿನಾಂಕ: 02-12-2023 ರ ಸರ್ವಿಸ್ ಸರ್ಟಿಫಿಕೇಟ್ ನ್ನು ಹಾಜರುಪಡಿಸಿದ್ದೇನೆ. ನಿ ಡಿ -1 ಮತ್ತು 2 ರಂತೆ ಬೇರೆ ಸರ್ವೆ ನಂಬರ್ ನ ಜಮೀನಿನಲ್ಲಿ ಬೋರವೆಲ್ ಹಾಕಿಸಿರುವ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ನಿ ಡಿ 1 ಮತ್ತು 2 ರಂತೆ ದಾಖಲಾತಿಯನ್ನು ದಾವಾ ಹಾಕಿದ ಮೇಲೆ ಹಾಜರುಪಡಿಸಿದ್ದೇನೆ ಅದಕ್ಕಿಂತ ಮೊದಲು ಬೋರವೆಲ್ ಸರ್ವಿಸ್ ಮಾಡಿಸಿರುತ್ತೇನೆ. ದಾವಾ ಸಲ್ಲಿಸಿದ ನಂತರ ನಿ ಡಿ 1 ಮತ್ತು 2 ದಾಖಲಾತಿಗಳನ್ನು ನೀವು ಬರೆಸಿಕೊಂಡು ತಂದು ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ನಿ ಡಿ 2 ನ್ನು

ದಿನಾಂಕ: 2-12-2023 ರಂದು ದಾವಾ ಸಲ್ಲಿಸಿದ ನಂತರ ಕೊಟ್ಟಿದ್ದಾರೆ. ನಿ ಡಿ 1 ಮತ್ತು 2 ನ್ನು ನೀವು ಸೃಷ್ಟಿ ಮಾಡಿಕೊಂಡು ಬಂದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೀರಿ ಎಂದರೆ ಸರಿಯಲ್ಲ. ಕೆಬಿಜೆಎನ್ಎಲ್ ಕಂಪನಿಯವರು ನಿಮ್ಮ ಹೊಲದಲ್ಲಿ ಯಾವುದೇ ಭೋರವೆಲ್ ನ್ನು ಅಳವಡಿಸಿರುವುದಿಲ್ಲ ಎಂದರೆ ಸರಿಯಲ್ಲ. ವಾದಿ ಅನಕ್ಷರಸ್ಥನಾಗಿದ್ದಾನೆ ಮತ್ತು ಬಡವನಾಗಿದ್ದಾನೆ ಆತನ ಹೊಲದಲ್ಲಿ ಉಳುಮೆ ಮಾಡಿಕೊಂಡು ಜೀವನ ಮಾಡುತ್ತಿರುವುದನ್ನು ತಪ್ಪಿಸುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ನ್ಯಾಯಾಲಯಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ